
# ಯುವಜನರಿಗೆ ಕುವೆಂಪು ಅವರ ಕರೆ

**ಕೆ.ಬಿ.ಪ್ರಭುಪ್ರಸಾದ್**



'ಮಹಾಛಂದಸ್ಸಿನ ಮೇರುಕೃತಿ ಜಗದ್ಭವ್ಯರಾಮಾಯಣ' (ಶ್ರೀರಾಮಾಯಣ ದರ್ಶನ) ಶ್ರೀಕುವೆಂಪುವ ಸೃಜಿಸುವ ಮುನ್ನ, 'ಜಗದಕವಿ ಯುಗದಕವಿ' ಎಂದು ಸಮಕಾಲೀನ ಶ್ರೇಷ್ಠಕವಿ ಬೇಂದ್ರೆಯವರು ಮುಕ್ತಮನದಿಂದ ಮೆಚ್ಚಿ ಕರೆಯುವ ಮುನ್ನ ಕುವೆಂಪು ಕೆ.ವಿ. ಪುಟ್ಟಪ್ಪನವರೆಂದೇ ಖ್ಯಾತರಾಗಿದ್ದರು. ಕಾವ್ಯಪ್ರಿಯರಿಗೆ, ವಿಶೇಷವಾಗಿ ತರುಣರಿಗೆ ತಮ್ಮ ಕವನಗಳಿಂದ ಸ್ಫೂರ್ತಿ-ಭಾವಪರವಶತೆಗಳನ್ನು ಉಂಟುಮಾಡುತ್ತಿದ್ದ ಜನಪ್ರಿಯ ತರುಣ ಕವಿಗಳಾಗಿದ್ದರು.

೨೦ನೇ ಶತಮಾನದ ಮೂವತ್ತರ ದಶಕ ಕನ್ನಡ ಸಾಹಿತ್ಯ ಲೋಕದಲ್ಲಿ ನವೋದಯದ ಗಾಳಿ ಬೀಸಲಾರಂಭವಾಗಿದ್ದ ಕಾಲ. ಶ್ರೀರಾಮಕೃಷ್ಣ-ವಿವೇಕಾನಂದರ ಗಾಢವಾದ ಪ್ರಭಾವದಿಂದ ಉಜ್ವಲಗೊಂಡ ವ್ಯಕ್ತಿತ್ವದ ಯುವಕವಿ ಪುಟ್ಟಪ್ಪನವರಿಗೆ ಆಗಿನ್ನೂ ೨೮-೩೦ರ ಪ್ರಾಯ.

ನಾಡಿನ ಪುಣ್ಯದ ಪೂರ್ವದಿಗಂತದಿ
ನವ ಅರುಣೋದಯ ಹೊಮ್ಮುತಿದೆ

ಎಂಬ ಅವರ ವಾಣಿ ತರುಣರೆದೆಯ ದಿಗಂತಗಳಲ್ಲಿ ಮೊಳಗುತ್ತ ಉತ್ಸಾಹವನ್ನು ಉಂಟುಮಾಡಿತು. ಹೀಗೆ ಹೃದಯವನ್ನು ಎಚ್ಚರಿಸಿದಂತೆಯೆ,

ಉದಯಿಸುತಿದೆ ನೂತನ ಯುಗದೇವತೆ
ಮಿಥ್ಯೆಯು ಮೌಢ್ಯತೆಯನು ಸೀಳಿ
ಜ್ಞಾನದ-ವಿಜ್ಞಾನದ ಮತಿ ಖಡ್ಗದೆ
ಮೈದೋರುವಳೈ ನವಕಾಳಿ

ಎಂದು ಹಾಡಿ ನವಯುಗದ ದಿಕ್ಸೂಚಿಯಾದ ಕಾವ್ಯಕಹಳೆಯನ್ನೂದಿ ವಿವೇಕಪೂರ್ಣವಾದ ವೈಚಾರಿಕತೆಯನ್ನೂ ಜಾಗ್ರತಗೊಳಿಸಿದರು.

ಕಳೆದ ಶತಮಾನದ ಮೂವತ್ತರ ದಶಕದಲ್ಲಿ ತರುಣ ಪುಟ್ಟಪ್ಪನವರು ಶ್ರೀರಂಗಪಟ್ಟಣದ ಯುವಜನ ಸಂಘದಲ್ಲಿ ಮೊದಲು, ಅನಂತರ ಬೇರೆ ಬೇರೆ ಯುವಕರ-ವಿದ್ಯಾರ್ಥಿಗಳ ಸಂಘಗಳಲ್ಲಿ ಮಾಡಿದ ಉಪನ್ಯಾಸಗಳನ್ನು ಮೈಸೂರಿನ ಕಾವ್ಯಾಲಯ ಪ್ರಕಾಶನ, **'ನಿರಂಕುಶ ಮತಿಗಳಾಗಿ'** (ನಾಲ್ಕು ಭಾಷಣಗಳು) ಎಂಬ ಪುಸ್ತಕ ರೂಪದಲ್ಲಿ ಪ್ರಕಟಿಸಿತು. ಜಗತ್ತಿಗೆ ವಿಶ್ವಮಾನವ ಸಂದೇಶವನ್ನು ನೀಡಿದ ಈ ಮಹಾಕವಿಯ ವಿಚಾರಧಾರೆ ಎಪ್ಪತ್ತು ವರ್ಷಗಳ ಹಿಂದೆಯೆ ಎಷ್ಟು ಪ್ರಬುದ್ಧವಾಗಿತ್ತು, ವಿವೇಕ ಹಾಗೂ ದೂರದರ್ಶಿತ್ವಗಳಿಂದ ಕೂಡಿತ್ತು ಎಂಬುದು ಈ ಉಪನ್ಯಾಸಗಳಿಂದ ತಿಳಿದುಬರುತ್ತದೆ. ಪ್ರಕೃತಿ ಸೌಂದರ್ಯದ ಆಕರ್ಷಣೆ ಮತ್ತು ಏಕಾಂತಪ್ರಿಯತೆ ಸಹಜವಾಗಿದ್ದ ಕವಿ ಹೃದಯ ಸಮಾಜವಿಮುಖವಾಗದೆ ಬದಲಿಗೆ ಸಾಮಾಜಿಕ ಕಾಳಜಿ, ನಮ್ಮ ಜನ ಉತ್ತಮವಾಗಬೇಕು, ಸುಖಿಗಳಾಗಬೇಕು ಎಂಬ ಕಳಕಳಿ, ಉಜ್ವಲವಾದ ರಾಷ್ಟ್ರಾಭಿಮಾನ, ದೇಶಭಕ್ತಿಗಳಿಂದಲೂ ತುಂಬಿರುವುದು ಈ ಉಪನ್ಯಾಸಗಳಲ್ಲಿ ವ್ಯಕ್ತವಾಗಿದೆ.

ಕುವೆಂಪು ಅವರು ತಾವು ತರುಣರಿದ್ದಾಗಲೆ ತಮ್ಮ ಸಮಕಾಲೀನ ಯುವಕರಿಗೆ ಈ ಉಪನ್ಯಾಸಗಳಲ್ಲಿ ನೀಡಿದ ಕರೆಯನ್ನು (ಇದರಲ್ಲಿ ಇಂದಿಗೂ ಪ್ರಸ್ತುತವಾದ ಅಮೂಲ್ಯ ಅಂಶಗಳಿರುವುದರಿಂದ) ಶ್ರೀ ಕುವೆಂಪು ಜನ್ಮಶತಮಾನೋತ್ಸವವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ, ಇಂದಿನ ಯುವಕ-ಯುವತಿಯರ ಗಮನಕ್ಕೆ ತರುವುದು ಉಚಿತವೆನಿಸುತ್ತದೆ. ಯುವಕರನ್ನು ಉದ್ದೇಶಿಸಿ ಹೇಳಿದ ಮಾತುಗಳು ಯುವತಿಯರಿಗೂ ಅನ್ವಯಿಸುವ ಸಲಹೆಗಳೆಂದು ಭಾವಿಸಬೇಕು. ಇವು ಎಲ್ಲ ಯುವಜನರೂ ಮತ್ತು ಆ ಪ್ರಾಯದ



**ಲೇಖಕರು ಆಂಗ್ಲಭಾಷೆಯ ಪ್ರಾಧ್ಯಾಪಕರಾಗಿದ್ದರು. ಕನ್ನಡ ಸಾಹಿತ್ಯದಲ್ಲಿ ಹೆಸರು ಗಳಿಸಿದ್ದಾರೆ ಹಾಗೂ ರಾಮಕೃಷ್ಣ ವಿವೇಕಾನಂದ ಸಾಹಿತ್ಯವನ್ನು ಅಧ್ಯಯನ ಮಾಡಿದ್ದಾರೆ.**



ಎಲ್ಲ ವಿದ್ಯಾರ್ಥಿಗಳೂ ಯುಕ್ತವಾಗಿ ಗ್ರಹಿಸಬೇಕಾದ ವಿಚಾರಗಳು.

'ಯುವಕರು ನಿರಂಕುಶಮತಿಗಳಾಗಬೇಕು,' ಎಂದು ಶ್ರೀರಂಗಪಟ್ಟಣದ ಯುವಜನ ಸಂಘದಲ್ಲಿ ಪುಟ್ಟಪ್ಪನವರು ಹೇಳಿದಾಗ, ಬಹುಶಾಂತವಾದ ವಿನಯತುಂಬಿದ ದನಿಯಲ್ಲೇ ಹೇಳಿದರೂ, ಆ ಮಾತುಗಳ ಹೊಸತನ ಯುವಜನರನ್ನು ಬಡಿದೆಬ್ಬಿಸಿತು. ಅವರ ನರನಾಡಿಗಳಲ್ಲಿ ನವಚೈತನ್ಯವೇ ಸಂಚರಿಸಿದಂತಾಗಿರಬೇಕು. 'ನಿರಂಕುಶ ಮತಿ' ಎಂಬ ವೈಚಾರಿಕತೆಯ ಬೀಜಮಂತ್ರ ಹೊಸ ಅಲೆಯನ್ನೆ ಎಬ್ಬಿಸಿತಾದರೂ ಅದರ ಪ್ರಭಾವ, ಅಪೇಕ್ಷಿತ ಪರಿಣಾಮ ಬಹುಕಾಲ ಉಳಿಯಲಿಲ್ಲ. ಎಲ್ಲೊ ಕೆಲವು ಯುವಕರ ಮನದಲ್ಲಿ ಅಂಕುರಿಸಿ ಸಸಿಯಾಗಿ ವೃಕ್ಷವಾಗಿ ಬೆಳೆದಿರಬಹುದಾದರೂ ಸಾಮೂಹಿಕ ಪರಿವರ್ತನೆಯನ್ನು ತಾರದೆ ಹೋಯಿತು.

ಯುವಜನರು ಮೊದಲು ಸ್ವತಂತ್ರವಾಗಿ ಆಲೋಚಿಸುವುದನ್ನು ರೂಢಿಸಿಕೊಂಡು ವಿಚಾರವಂತರಾಗಬೇಕು. ಅರ್ಥವಿಲ್ಲದ ಸಾಂಪ್ರದಾಯಿಕ ಮತೀಯ ಹಾಗೂ ಸಾಮಾಜಿಕ ಪದ್ಧತಿಗಳನ್ನೂ ಅಜ್ಞಾನ ಮತ್ತು ಅವಿದ್ಯಾಜನ್ಯವಾದ ಮೌಢ್ಯತೆಯನ್ನೂ ಮೂಢನಂಬಿಕೆಗಳನ್ನೂ ನಿಷ್ಠುರವಾಗಿ ತೊಡೆದುಹಾಕಿ ವೈಚಾರಿಕ ಮನೋಧರ್ಮವನ್ನು ಬೆಳೆಸಿಕೊಳ್ಳಬೇಕು. ದೈವಶ್ರದ್ಧೆ, ಆತ್ಮಶ್ರದ್ಧೆ ಮತ್ತು ವಿಶಾಲ ಹೃದಯದ ಮಾನವೀಯ ಅಂತಃಕರಣ—ಈ ಮೂರನ್ನೂ ಬಲಪಡಿಸಿಕೊಂಡು ಜೀವನದಲ್ಲಿ ಉದಾತ್ತವೂ ಉನ್ನತವೂ ಆದ ಗುರಿಯನ್ನಿರಿಸಿಕೊಂಡು ಅದರ ಸಾಧನೆಯಲ್ಲಿ ಸತತವಾಗಿ ನಿರತರಾಗಬೇಕು—ಈ ಮುಂತಾದ ಅಂಶಗಳು ಈ ನಾಲ್ಕೂ ಉಪನ್ಯಾಸಗಳ ಒಟ್ಟು ಮುಖ್ಯಸಾರವಾಗಿವೆ.

"ನಾನಿಲ್ಲಿ ಗುರುಸ್ಥಾನದಲ್ಲಿ ನಿಂತಿಲ್ಲ, ನೀವೂ ಶಿಷ್ಯಸ್ಥಾನದಲ್ಲಿ ಕುಳಿತಿಲ್ಲ," ಎಂದು ಸ್ಪಷ್ಟಪಡಿಸುತ್ತ ಈ ವಿನಯಶೀಲ ಪ್ರಾಜ್ಞತರುಣ, "ಇದು ಉಪದೇಶವಲ್ಲ; ವಿಜ್ಞಾಪನೆ; ಆವೇಶದಿಂದ ಆಡಿದುದಲ್ಲ, ಆಕ್ರೋಶದಿಂದಲೂ ಆಡಿದುದಲ್ಲ. ದೀರ್ಘಚಿಂತನೆ, ಜಿಜ್ಞಾಸೆಗಳಿಂದ ಪ್ರಶಾಂತಮನದಲ್ಲಿ ಮಂಥನ ಮೂಡಿದ ಬಳಿಕ ರೂಪ ತಳೆದ ರಚನಾತ್ಮಕ ವಿಚಾರಗಳು. ಇವುಗಳನ್ನು ಕುರುಡಾಗಿ ಸ್ವೀಕರಿಸದೆ ಮತಿಯ ಒರೆಗಲ್ಲಿಗೆ ಹಚ್ಚಿ, ಪರೀಕ್ಷಿಸಿ, ಸರಿಯೆನಿಸಿದರೆ ಮಾತ್ರ ಅನುಮೋದಿಸಿರಿ. ಶ್ರೀರಾಮಕೃಷ್ಣ ಪರಮಹಂಸರನ್ನು ಕೂಡ ಯುವಕ ನರೇಂದ್ರ (ಸ್ವಾಮಿ ವಿವೇಕಾನಂದ) ಪರೀಕ್ಷೆ ಮಾಡಿಯೆ ಗುರುವೆಂದು ಒಪ್ಪಿಕೊಂಡದ್ದು," ಎಂದು ಹೇಳುತ್ತಾ "ಪಕ್ಷಪಾತವಿಲ್ಲದೆ ಕಿವಿಗೊಟ್ಟು ಕೇಳಿರಿ," ಎಂದು ವಿನಂತಿಸುತ್ತಾರೆ. ಪೂರ್ವಗ್ರಹಪೀಡಿತರಾಗದೆ ಗಮನವಿಟ್ಟು ಕೇಳುವುದು, ಅನಂತರ ಆ ಬಗ್ಗೆ ಪರಾಮರ್ಶೆ ಮಾಡುವುದು ವೈಚಾರಿಕತೆಯ ಮೊದಲ ಸೂತ್ರ.

'ನಿರಂಕುಶ ಮತಿ' ಎಂಬ ಪದಪುಂಜ ಪುಟ್ಟಪ್ಪನವರೆ ನಾಣ್ಯೆಸಿದುದು. ಅದರ ಅರ್ಥವನ್ನು ಅವರೆ ಬಿಡಿಸಿ ಹೇಳುತ್ತಾರೆ. ನಿರಂಕುಶ 'ಮನ' ಅಲ್ಲ. ನಿರಂಕುಶ 'ಮತಿ'. ಮನ ಎಂದಾಗಿದ್ದರೆ ಸ್ವೇಚ್ಛಾಚಾರ ಎಂಬ ಅರ್ಥ ಬರುತ್ತಿತ್ತು. 'ಮತಿ' ಎಂದರೆ ಬುದ್ಧಿ, ವಿಚಾರಶಕ್ತಿ. ಮನುಷ್ಯನಿಗೆ ಮಾತ್ರ ನಿಸರ್ಗ ವಿತ್ತಿರುವ ವರ. ಸರ್ವೋತ್ಕೃಷ್ಟವಾದ ಆಯುಧ. ಬಾಳಿನ ಕತ್ತಲಿನಲ್ಲಿ ದಾರಿ ತೋರುವ ಕೈದೀವಿಗೆ. ಮನುಷ್ಯತ್ವದಿಂದ ದೈವತ್ವಕ್ಕೇರಲು ಸಹಾಯಕವಾದ ಸಾಧನೋಪಕರಣ. ಮತಿ ಮನುಷ್ಯರೆಲ್ಲರಲ್ಲಿಯೂ ಇದೆ, ಸ್ವಲ್ಪವಾಗಿಯೊ, ಹೆಚ್ಚಾಗಿಯೊ. ಆದರೆ ಇಂಥಾ ಮತಿಯ ಗತಿ ಏನಾಗಿದೆ? ಬಳಸದೆ ತುಕ್ಕು ಹಿಡಿದಿದೆ. ಮೌಢ್ಯ-ಮೂಢನಂಬಿಕೆಗಳಿಗೆ ಬಲಿಯಾಗಿ ಕಂದಾಚಾರಗಳ ದಾಸ್ಯದಲ್ಲಿದ್ದು ದೀನವಾಗಿದೆ. ಕ್ಷುದ್ರದೇವತೆಗಳ ಭಯ, ಸಮಾಜದ ಭಯ, ಕಾಲ್ಪನಿಕ ಸ್ವರ್ಗ-ನರಕಗಳ ಭಯಗಳಿಂದ ಸತ್ವರಹಿತವಾಗಿದೆ. **ಯುವಜನರು ಅಜ್ಞಾನ, ಭಯಗಳಿಂದ ತಮ್ಮ ಮತಿಯನ್ನು ಮುಕ್ತಗೊಳಿಸಿಕೊಂಡು, ಸ್ವತಂತ್ರವಾದ ಆಲೋಚನೆ, ಅಧ್ಯಯನ, ಚಿಂತನೆ, ಚರ್ಚೆ ಇತ್ಯಾದಿ ಸಾಧನೆಗಳಿಂದ ಹರಿತಗೊಳಿಸಿಕೊಳ್ಳಬೇಕು. ಇದುವರೆಗೆ ಇದು ಆಗಿಲ್ಲವಾದರೆ ಈ ಕ್ಷಣದಿಂದಲೆ ದೃಢಸಂಕಲ್ಪ ಮಾಡಿ ಹೊಳಪುಗೊಳಿಸುವ, ಹರಿತಗೊಳಿಸುವ ಸಾಧನೆಯಲ್ಲಿ ತೊಡಗಬೇಕು.**

ಮತಿಯನ್ನು ದಾಸ್ಯ, ನಿರ್ಬಂಧಗಳಲ್ಲಿಟ್ಟು ಕುಗ್ಗಿಸಿರುವ ಅಂಶಗಳು ಯಾವುವು? ಜಾತೀಯತೆ, ಮತೀಯ ಸಂಕುಚಿತ ದೃಷ್ಟಿ. ಒಂದು ಕಡೆ ಅವಿದ್ಯಾವಂತ ಗ್ರಾಮೀಣ ಜನ ಮತಿಹೀನರಾಗಿ ನಾನಾ ಕ್ಷುದ್ರ ದೇವತೆಗಳ ಇಲ್ಲವೆ ಭೂತ-ಪ್ರೇತ-ಪಿಶಾಚಿಗಳ ಭಯ ಪೂಜೆಗಳಲ್ಲಿ ಮುಳುಗಿ, ಮೂಢನಂಬಿಕೆಗಳನ್ನು ಬೆಳೆಸಿಕೊಂಡು, ಧರ್ಮದ ಸೋಗಿನಲ್ಲಿ ನಡೆಯುವ ಶೋಷಣೆಗಳಿಗೆ ಒಳಗಾಗಿದ್ದಾರೆ. ಗೊಡ್ಡು ಧಾರ್ಮಿಕ-

ಸಾಮಾಜಿಕ ಸಂಪ್ರದಾಯ, ಕಟ್ಟುಕಟ್ಟಳೆಗಳು, ಅರ್ಥಹೀನ ಧಾರ್ಮಿಕ ಬಾಹ್ಯಾಚರಣೆಗಳು, ಜಾತೀಯ ವಿಶಿಷ್ಟ ಲಾಂಛನಗಳು, ಮೇಲು-ಕೀಳು, ಸ್ಪೃಶ್ಯ-ಅಸ್ಪೃಶ್ಯ, ಮಡಿ-ಮೈಲಿಗೆ, ಭೋಜನ ನಿರ್ಬಂಧಗಳು ಇತ್ಯಾದಿಗಳೆ ಮತಧರ್ಮಗಳೆನಿಸಿಕೊಂಡಿವೆ. ಕೆಲಸಕ್ಕೆ ಬಾರದ, ಸಮಷ್ಟಿಹಿತಕ್ಕೆ ಶ್ರೇಯಸ್ಕರವಲ್ಲದ ನೂರಾರು ಆಚಾರ-ವ್ಯವಹಾರಗಳು ಮತದ ಹುರುಳಾಗಿವೆ. ಗೀತೆ-ಉಪನಿಷತ್ತುಗಳು, ಸಂತರು-ಜ್ಞಾನಿಗಳು ತಮ್ಮ ಸ್ವಾನುಭವ, ಸತ್ಯದರ್ಶನಗಳಿಂದ ನೀಡಿದ ದಿವ್ಯಸಂದೇಶಗಳು, ಸಮಸ್ತ ಜೀವರ ಹಿತದ ಉದಾತ್ತ ತತ್ತ್ವಗಳು ಮೂಲೆಗುಂಪಾಗಿವೆ, ಎಂದು ತಮ್ಮ ಸುತ್ತಮುತ್ತಣ ಪರಿಸ್ಥಿತಿಯನ್ನು ಕಂಡು ತರುಣಕವಿ ಪುಟ್ಟಪ್ಪನವರು ಅತೀವ ವ್ಯಥೆಯಿಂದ ಹೇಳುತ್ತಾರೆ. ಅವರ ನೋವನ್ನು ಸಾಮಾಜಿಕ ಕಳಕಳಿಯನ್ನು ಅರ್ಥ ಮಾಡಿಕೊಳ್ಳಬೇಕು."ಅಮೃತಪುತ್ರರಾದ ನಾವೆಲ್ಲರೂ ಆ ಅಮೃತವಾಣಿಗೆ ಕಿವಿಗೊಟ್ಟು, ಸನ್ಮತಿಗಳಾಗಬೇಕು."

ವೇದ ಎಂದರೆ ತಿಳಿದುದು ಎಂದರ್ಥ. ವಿಚಾರದ ಬೆಳಕಿನಲ್ಲಿ ವಿಜ್ಞಾನದ ಪ್ರಯೋಗಗಳಿಂದ ಸಿದ್ಧವಾಗಿ ತಿಳಿದ ಸತ್ಯವೂ ವೇದವೆ. ವೇದಗಳು, ಋಷಿಗಳು ಎಂದರೆ ಯಾವುದೊ ಪುರಾತನ ಕಾಲದಲ್ಲಿ ಆಗಿಹೋದ ಸಂಗತಿ ಎಂದು ತಿಳಿಯಬಾರದು. ಇಂದಿಗೂ ಇರುವ ಮತ್ತು ಬರುತ್ತಲೇ ಇರುವ ಘಟನೆಗಳು. ಕಾಲಕಾಲಕ್ಕೆ ಬರುವ ಹೊಸ ಋಷಿಗಳ ಹೊಸ ವೇದಗಳಿಗೂ ಮನ ತೆರೆದಿರಬೇಕು. ಯುವಜನರ ಮತಿ ಕೊಳೆ-ಪಾಚಿ ತುಂಬಲನುಕೂಲವಾದ ನಿಂತ ನೀರಾಗಬಾರದು. ನಿತ್ಯವೂ ಹರಿಯುವ ನಿರ್ಮಲವಾದ ಹೊಳೆ ಆಗಬೇಕು.

ಜೊತೆಗೆ ಸರಿ ಯಾವುದು, ತಪ್ಪು ಯಾವುದು ಎಂಬ ಸಾರಾಸಾರ ಜ್ಞಾನ ಮತ್ತು ವಿವೇಕ ಇರಬೇಕು. ಮತದ ಬಗ್ಗೆ ಧರ್ಮದ ಬಗ್ಗೆ ಭ್ರಮೆಗಳಿರಬಾರದು, ತಪ್ಪುಗ್ರಹಿಕೆಗಳೂ ಇರಬಾರದು. ಹಳ್ಳಿಯಾಗಲಿ ನಗರವಾಗಲಿ ಅಲ್ಲಿನ ಪ್ರತಿಯೊಬ್ಬರೂ, ಅದರಲ್ಲೂ ಯುವಜನರು, ನಿತ್ಯವೂ ಒಳ್ಳೆಯ ಪುಸ್ತಕ, ಒಳ್ಳೆಯ ಪತ್ರಿಕೆಗಳನ್ನು ಓದಿ ತಿಳಿವಳಿಕೆಯನ್ನು ವಿಸ್ತರಿಸಿಕೊಳ್ಳುತ್ತಿರಬೇಕು. ಆದರೆ ಪುಸ್ತಕಗಳಲ್ಲಿ ಅಚ್ಚಾಗಿದೆ, ಪತ್ರಿಕೆಗಳಲ್ಲಿ ಪ್ರಕಟವಾಗಿದೆ ಎಂದ ಮಾತ್ರಕ್ಕೆ ಖಂಡಿತವಾಗಿಯೂ ಸತ್ಯ ಎಂದು ತಿಳಿಯಬಾರದು. ಅವುಗಳ ಸತ್ಯಾಸತ್ಯತೆಯನ್ನು ಸಾಧಾರವಾಗಿದೆಯೇ ಎಂದು ಪರಾಮರ್ಶಿಸಬೇಕು.

ಧರ್ಮದ ನಿಜವಾದ ಗುರಿ ಸತ್ಯಸಾಕ್ಷಾತ್ಕಾರ. ಅದು ಪರಮಾನಂದವನ್ನೂ ಪರಮಶಾಂತಿಯನ್ನೂ ನೀಡುತ್ತದೆ. ವ್ಯಕ್ತಿಯ ಆತ್ಮೋದ್ಧಾರ-ಸಮಷ್ಟಿಯ ಹಿತ ಎರಡನ್ನೂ ಸಾಧಿಸಬೇಕು. ಇದೇ ಸ್ವಾಮಿ ವಿವೇಕಾನಂದರು ನೀಡಿದ ದಿವ್ಯಮಂತ್ರ. ಇದು ನಮ್ಮ ಯುವಜನರ ಜೀವನದ ಗುರಿ ಆಗಬೇಕು. ಸಾಮೂಹಿಕ ಪ್ರಾರ್ಥನೆಯಲ್ಲಿ ಅಗಾಧವಾದ ಶಕ್ತಿಯಿದೆ ನಿಜ. ಆದರೆ ಯಜ್ಞ-ಯಾಗ-ಪ್ರಾಣಿಬಲಿಗಳಿಂದ ಮಳೆ ಬರಿಸಲು, ಸಾಂಕ್ರಾಮಿಕ ರೋಗಗಳನ್ನು ಹೋಗಲಾಡಿಸಲು ಸಾಧ್ಯವಿಲ್ಲ. ಉದ್ದೇಶ ಒಳ್ಳೆಯದಿರಬಹುದು. ಆದರೆ ಈ ಧಾರ್ಮಿಕ ಕಾರ್ಯಗಳು ಜನಸಾಮಾನ್ಯರ ಮೌಢ್ಯದ ದುರುಪಯೋಗ ಮಾಡಿಕೊಳ್ಳುವ, ಶೋಷಣೆ ಮಾಡುವ ತಂತ್ರಗಳಾದಾಗ ಅದರ ಹಿಂದಿನ ದುಷ್ಟಮನಸ್ಸಿನ ಬಗ್ಗೆ ಎಚ್ಚರಿಕೆಯಿಂದಿರಬೇಕು. ಹೀಗೆ ಹರಿಯುತ್ತದೆ ಈ ಪ್ರಾಜ್ಞ ತರುಣಕವಿಯ ವಿಚಾರಧಾರೆ.

ವಿಚಾರವಂತಿಕೆಯ ಜೊತೆಗೆ ಸಾಮಾಜಿಕ ಕಾಳಜಿ ಇರುವ ಈ ತರುಣ ಕವಿ ಎಪ್ಪತ್ತು ವರ್ಷಗಳ ಹಿಂದೆ ಕಂಡ ಸಾಮಾಜಿಕ ಪರಿಸ್ಥಿತಿ ಈಗ ಬಹಳಷ್ಟು ಬದಲಾಗಿದೆ. ದೇವಾಲಯ ಪ್ರವೇಶ ನಿಷೇಧ, ಸ್ಪೃಶ್ಯ-ಅಸ್ಪೃಶ್ಯ ಭಾವನೆ, ಮಡಿ-ಮೈಲಿಗೆ, ಸಹ ಭೋಜನ, ಶೂದ್ರರ ಬಗ್ಗೆ ದಲಿತರ ಬಗ್ಗೆ ಇದ್ದ ಅಸಹನೆ, ತಿರಸ್ಕಾರ, ಬಾಲ್ಯವಿವಾಹ, ಮುಂತಾದ ವಿಚಾರಗಳು ಪೂರ್ಣವಾಗಿಯಲ್ಲವಾದರೂ  ಬಹುಮಟ್ಟಿಗೆ ಹೋಗಿವೆ. ಆದರೆ ಮದ್ಯಪಾನ, ಪ್ರಾಣಿವಧೆ, ಹಿಂಸೆ, ಕ್ರೌರ್ಯ, ಮುಂತಾದ ಇನ್ನು ಕೆಲವು ಅನಿಷ್ಟಗಳು, ದುರ್ವ್ಯಸನಗಳು ಈಗ ಇನ್ನೂ ಹೆಚ್ಚು ತೀವ್ರವಾಗಿ ವ್ಯಾಪಕವಾಗಿ ಬೆಳೆದಿರುವುದೂ, ಚಿರಂತನ ಮೌಲ್ಯಗಳನ್ನು ಹೊರತುಪಡಿಸಿ, ಬೇರೆ ಕೆಲವು ವೈಯಕ್ತಿಕ ಹಾಗೂ ಸಾಮಾಜಿಕ ಸುಧಾರಣೆಗಳ ಬಗ್ಗೆ ಕವಿ ಪುಟ್ಟಪ್ಪನವರು ತಮ್ಮ ಅಂದಿನ ಉಪನ್ಯಾಸಗಳಲ್ಲಿ ಪ್ರಸ್ತಾಪಿಸಿರುವ ಅಂಶಗಳು ಇಂದಿಗೂ ಪ್ರಸ್ತುತವಾಗಿರುವುದೂ ವಿಷಾದನೀಯ. ಬಹುಸಂಖ್ಯಾತ ಯುವಜನರಲ್ಲಿ  ಬೆಳೆದಿರುವ, ಬೆಳೆಯುತ್ತಿರುವ, ಮತಿಹೀನತೆ, ಮೌಢ್ಯ, ಮೂಢನಂಬಿಕೆ ಹಾಗೂ ಅವಿವೇಕದ ಧೋರಣೆಗಳು ಈಗ ಬೇರೆ ರೂಪತಾಳಿವೆ ಅಷ್ಟೆ. ಜೊತೆಗೆ ವಿಚಾರವಂತಿಕೆಯ ಹೆಸರಿನಲ್ಲಿ ಯುವಜನರು ಹಲವರು ಆತ್ಮವಿಕಾಸದ ಬಗ್ಗೆ, ಶ್ರೇಷ್ಠವಾದ ಜೀವನ-ಮೌಲ್ಯಗಳ ಬಗ್ಗೆ ತೋರುವ ಅನಾದರಣೆ, ಅಸಹನೆ, ಅಪನಂಬಿಕೆ ಮತ್ತು ಉಪೇಕ್ಷೆ, ಆಧುನಿಕತೆಯ  ಹೆಸರಿನಲ್ಲಿ ಮಾಡುತ್ತಿರುವ ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆ, ಇವುಗಳ ಅಪಾಯಕರ ಪರಿಣಾಮ ಎಲ್ಲಿಗೆ  ಕೊಂಡೊಯ್ಯಬಹುದೆಂಬುದು ಆತಂಕಕಾರಿಯಾಗಿದೆ. ಇವೆಲ್ಲ ಆಧುನಿಕತೆಯ ಪ್ರಗತಿಯ ಲಕ್ಷಣಗಳು, ಇವುಗಳಿಗೆ ವಿರೋಧವಾದ ನಿಲುವೇ ಗೊಡ್ಡು ಸಂಪ್ರದಾಯದ ಪಳೆಯುಳಿಕೆ, ಪ್ರತಿಗಾಮಿಯಾದುದು ಎಂದು ವಾದಿಸುವ ಮತ್ತು ಈ ಬಗೆಯ ನಡೆವಳಿಕೆಯನ್ನು ಸಮರ್ಥಿಸುವ ವೈಚಾರಿಕತೆ ಇನ್ನೂ ಹೆಚ್ಚು ಆತಂಕಕಾರಿ!

ಪುಟ್ಟಪ್ಪನವರು ಪ್ರಬಲವಾಗಿ ವಿರೋಧಿಸಿದ ಸಾಮಾಜಿಕ ಅಸಮಾನತೆ-ಅನ್ಯಾಯಗಳಿಗೆ ಕಾರಣವಾದ ಚಾತುರ್ವರ್ಣ್ಯ ವಿಂಗಡನೆ ವಾಸ್ತವವಾಗಿ ಈಗ ಕಾಣದೆ ಹೋದರೂ ಅದರ ಹಿಂದಿನ ಮನೋಧರ್ಮ ಬದಲಾದಂತೆ ಕಾಣುವುದಿಲ್ಲ. ಹೀಗಾಗಿ ಹೊಸ ಬಗೆಯ ವರ್ಣವ್ಯವಸ್ಥೆ, ಶ್ರೇಣೀಕೃತ ಸಮಾಜದ ಹೊಸರೂಪಗಳಲ್ಲಿ ವಿಜೃಂಭಿಸುತ್ತಿದೆ.

'ಮತಭ್ರಾಂತಿ ಬಿಡಿ ಮತಿಯ ದೀವಿಗೆ ಹಿಡಿಯಿರಿ', ಎಂಬುದು ಅವರ ಕರೆ. ಈಗ ಮತಭ್ರಾಂತಿ ಒಂದು ರೀತಿಯಲ್ಲಿ ಬಹುಮಟ್ಟಿಗೆ ಹೋಗಿದೆ. ಆದರೆ ಮತಿಯ ದೀವಿಗೆಯನ್ನು ಹಿಡಿಯುವ ಕಾರ್ಯ ಮಾತ್ರ ಇನ್ನೂ ಆಗಬೇಕಾಗಿದೆ. ನಗರದ ವಿದ್ಯಾವಂತರೆನಿಸಿಕೊಂಡವರೂ ಮತಿಗೆಟ್ಟು, ಮತಾಂಧತೆ, ವೈರ, ಸಂಶಯದೃಷ್ಟಿಗಳನ್ನು ಬೆಳೆಸಿಕೊಂಡು ಕೋಮುಗಲಭೆಗಳನ್ನು ಪ್ರಚೋದಿಸುತ್ತಾರೆ. ಅದಕ್ಕೆ ಪ್ರತಿಕ್ರಿಯೆಯಾಗಿ ಎದಿರೇಟು, ಪ್ರತೀಕಾರಗಳ ಸರಣಿ ಆರಂಭವಾಗುತ್ತದೆ. ಎಲ್ಲ ಧರ್ಮಗಳೂ ಸಮಾನವಾಗಿ ಶ್ರೇಷ್ಠವೆ. ವಿಶಾಲ ಮನೋಭಾವ, ಪ್ರೀತಿ, ಕರುಣೆ, ಸಮಸ್ತಜಗತ್ತಿಗೆ ಒಳ್ಳೆಯದಾಗಲಿ ಎಂಬ ತತ್ತ್ವ, ನೈತಿಕ ಮೌಲ್ಯಗಳು ಎಲ್ಲ ಧರ್ಮಗಳಲ್ಲೂ ಪ್ರತಿಪಾದಿತವಾಗಿವೆ. ಆದರೆ ಮತಸಹಿಷ್ಣುತೆಯನ್ನು ಇರಿಸಿಕೊಳ್ಳದ ಮತಾಂಧತೆ, ತಮ್ಮ ಧರ್ಮವೊಂದೇ ಮಾನವರೆಲ್ಲರ ಉದ್ಧಾರದ ಏಕೈಕ ಮಾರ್ಗ ಎಂಬ ಮತಿಹೀನವಾದ ಮತ್ತು ತಪ್ಪಾದ ಅಭಿಪ್ರಾಯ ನಿಷ್ಕಾರಣವಾದ ದ್ವೇಷಕ್ಕೆ, ಅನ್ಯಮತೀಯರನ್ನು ತಮ್ಮ ಜಾತಿಗೆ ಸೇರಿಸಿಕೊಳ್ಳಲು ತೋರುವ ಉತ್ಸಾಹಕ್ಕೆ, ಕಾರಣವಾಗುತ್ತದೆ. ಹೀಗೆ ಮತಾಂಧತೆಯೆ ಮತಾಂತರಗೊಳಿಸುವ ಪ್ರವೃತ್ತಿಗೆ ದಾರಿ ಮಾಡುತ್ತದೆ. ಮತಾಂತರ ಕ್ರಿಯಾರೂಪ ಧರಿಸಿದಾಗ ಅದಕ್ಕೆ ಬರುವ ಪ್ರತಿಕ್ರಿಯೆ ಉಗ್ರರೂಪ ತಾಳಿ ಕೋಮುಘರ್ಷಣೆ, ವೈರ-ಪ್ರತೀಕಾರ, ಹಿಂಸೆ-ಕ್ರೌರ್ಯಗಳಿಗೆ, ಹುಚ್ಚು ಸಮೂಹಸನ್ನಿಗೆ ಆಸ್ಪದವಾಗುತ್ತದೆ. ಹೀಗೆ ಮತಾಂಧತೆಗೆ ಪ್ರತಿಮತಾಂಧತೆ, ವೈರಕ್ಕೆ ವೈರ ಮರಿಹಾಕುತ್ತ ಹೋಗುತ್ತವೆ. ಜಾತ್ಯತೀತ ಎಂದು ಹೇಳಿಕೊಳ್ಳುತ್ತಾ ವಿದ್ಯಾವಂತರಾದವರೂ ಜಾತೀಯತೆಯನ್ನೆ ಎಲ್ಲದರಲ್ಲೂ ಗಮನಿಸುತ್ತ ಎತ್ತಿ ಹಿಡಿಯುತ್ತಾ ಪರಸ್ಪರ ಶಂಕೆ, ವಿಷಭಾವನೆಗಳಿಗೆ, ಗಲಭೆ-ಘರ್ಷಣೆಗಳಿಗೆ ಪರೋಕ್ಷವಾಗಿ ಪೋಷಣೆ ನೀಡುತ್ತಿರುವುದನ್ನು ಗಮನಿಸಿದರೆ ಕವಿ ಆಶಿಸುವ ಸರ್ವಸಮಾನತೆ-ಸಮಾನಗೌರವ-ಸಮತೆ-ಸಹಬಾಳ್ವೆಯ ಸಮಾಜದ ನಿರ್ಮಾಣ ಸಾಧ್ಯವೇ ಇಲ್ಲವೇನೊ ಎಂಬ ಹತಾಶೆಯುಂಟಾಗುತ್ತದೆ. ಆದರೆ **ತರುಣಕವಿ ಪುಟ್ಟಪ್ಪನವರು ದೃಢವಾಗಿ ನಂಬಿ ಎಲ್ಲರಿಗೂ ಶಪಥಮಾಡಿ ಸೂಚಿಸುವ ಶ್ರೀರಾಮಕೃಷ್ಣ ಪರಮಹಂಸರ ಸರ್ವಧರ್ಮಸಮನ್ವಯ ತತ್ತ್ವವೆ, ನವಯುಗದ ಆಶಾಕಿರಣವಾಗಿ ಭರವಸೆಯನ್ನು ನೀಡುತ್ತದೆ. ಎಲ್ಲರೂ ತಮ್ಮ ತಮ್ಮ ಧರ್ಮಗಳನ್ನೇ ನಿಷ್ಠೆಯಿಂದ ಪಾಲಿಸುತ್ತ ಶ್ರೇಷ್ಠ ಮಾನವರಾಗಲಿ, ಸೋದರರಂತೆ ಪ್ರೀತಿಯಿಂದ ಬಾಳಲಿ ಎಂಬ ಸ್ವಾಮಿ ವಿವೇಕಾನಂದರ ಕರೆಯೆ ಯುವಜನರಿಗೆ ಕುವೆಂಪು ನೀಡುವ ಕರೆಯಾಗಿದೆ.**

ಇಂದಿನ ಯುವಜನರಲ್ಲಿ ಹಿರಿದಾದ ಒಂದು ಗುರಿ ಇಲ್ಲ. ಮಾರ್ಗದರ್ಶನ ನೀಡಲು ಸಮರ್ಥ ಗುರುಗಳಿಲ್ಲ ಎಂದು ಹೇಳುವುದು ಬಹುಸಂಖ್ಯೆಯ ಯುವಜನರನ್ನಷ್ಟೆ ಕುರಿತದ್ದು. ಕೆಲವು ಯುವಕ-ಯುವತಿಯರು ನಿಜಕ್ಕೂ ಆದರ್ಶಪ್ರಾಯವಾದ ಮೌಲ್ಯಯುಕ್ತ ಜೀವನವನ್ನು ಯಾವ ಪ್ರಚಾರವೂ ಇಲ್ಲದೆ, ಪತ್ರಿಕಾಪ್ರಸಿದ್ಧಿಯನ್ನೂ ಕಾಣದೆ, ಮರೆಯಲ್ಲೆ ತಮ್ಮಷ್ಟಕ್ಕೆ ತಾವು ನಡೆಸುತ್ತಿದ್ದಾರೆ. ಅಲ್ಲಲ್ಲಿ ಸಣ್ಣ ಸಣ್ಣ ಸಂಘಟನಾತ್ಮಕ ಕಾರ್ಯದಲ್ಲೂ ನಿರತರಾಗಿದ್ದಾರೆ. ಇನ್ನು ಕೆಲವರು ಸಂಘಟಿತರಾಗದೆ ವೈಯಕ್ತಿಕ ನೆಲೆಯಲ್ಲೆ ನಿಂತು ಸಾಮೂಹಿಕ ನೆಲೆಯಲ್ಲಿ ಅಸಹಾಯಕರಾಗಿದ್ದಾರೆ. ಕ್ರಿಯಾಶೀಲರಾದವರ ಪ್ರಯತ್ನಗಳು ಸಹ ತಿದ್ದಲು ದುಸ್ಸಾಧ್ಯವಾದ ಸಾಮಾಜಿಕ ಪರಿಸರ ಹಾಗೂ ಪ್ರತಿರೋಧಿಶಕ್ತಿಗಳ ಬಲದಿಂದಾಗಿ ವಿಫಲವಾಗುತ್ತಿವೆ. ಎಲ್ಲಕ್ಕೂ ಮುಖ್ಯವಾಗಿ ಯುವಪೀಳಿಗೆಗೆ ಒಳ್ಳೆಯ ಮೇಲ್ಪಂಕ್ತಿಯಾಗಬಲ್ಲ, ನೈತಿಕಬಲ ಹಾಗೂ ಸಾಮರ್ಥ್ಯವುಳ್ಳ ನಾಯಕರೇ ಇಲ್ಲ ಎಂಬ ಸ್ಥಿತಿಯಾಗಿದೆ. ಇಲ್ಲಿಯೂ ಅಪವಾದವಾಗಿ ಅಲ್ಲೊಬ್ಬರು ಇಲ್ಲೊಬ್ಬರು ಅನುಸರಣೀಯ ಯೋಗ್ಯ ನಾಯಕರು ಇಲ್ಲದಿಲ್ಲ. ಇಂಥ ಸಂದರ್ಭದಲ್ಲಿ ಯುವಜನರಿಗೆ ತರುಣ ಕುವೆಂಪು ನೀಡಿದ ಕರೆ ಬಹಳ ಮಹತ್ವದ್ದಾಗುತ್ತದೆ.

ನಿರಂಕುಶಮತಿಗಳಾಗುವುದು ಮೊದಲಹೆಜ್ಜೆ. ಹಾಗೆ ಆಗಬೇಕಾದರೆ ದಾಸ್ಯಮನೋಧರ್ಮ ಹೋಗಬೇಕು. ಆತ್ಮವಿಶ್ವಾಸದಿಂದ ತಳೆಯುವ ಸ್ವಾಭಿಮಾನವನ್ನೂ ಆತ್ಮಗೌರವವನ್ನೂ ಇರಿಸಿಕೊಳ್ಳಬೇಕು. ಅದಕ್ಕಾಗಿ ಯುವಜನರು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು. ಅಂದರೆ ಉದ್ಯಮಶೀಲರಾಗಬೇಕು. ಸೋಮಾರಿಗಳಿಗೆ ಸ್ವಾವಲಂಬನೆ ಸಾಧ್ಯವಿಲ್ಲ. ಸರ್ಕಾರಿ ನೌಕರಿಗೇ ಜೋತುಬೀಳದೆ, ತಮ್ಮೊಳಗಿನ ಸಹಜ ಒಲವು-ಕುಶಲತೆಗಳಿಗನುಗುಣವಾಗಿ, ಆ ಶಕ್ತಿ-ಸಾಮರ್ಥ್ಯಗಳು ಪೂರ್ಣ ವಿಕಾಸಗೊಳ್ಳಲು ಸಹಾಯಕವಾದ ವೃತ್ತಿಗಳನ್ನು ಕೈಕೊಳ್ಳಬೇಕು. ಪ್ರಾಮಾಣಿಕವಾದ ಯಾವ ದುಡಿಮೆಯಾದರೂ ಸರಿ. ಸ್ವಂತವಾದ, ಹಣವಿಲ್ಲದೆ ಹೋದರೆ ಬುದ್ಧಿಯನ್ನೆ ಬಂಡವಾಳವಾಗಿಸಿಕೊಂಡು, ಉದ್ಯೋಗವನ್ನು ಮಾಡಿಕೊಳ್ಳಲು ಪ್ರಯತ್ನಿಸಬೇಕು. ಮನಸ್ಸಿದ್ದಲ್ಲಿ, ಇಚ್ಛಾಶಕ್ತಿಯನ್ನು ಬಲಪಡಿಸಿಕೊಂಡಲ್ಲಿ, ಮಾರ್ಗ ಇದ್ದೇ ಇರುತ್ತದೆ. ವಿಲಾಸಗಳಿಗೆ ಮನಸೋಲದೆ ಶ್ರಮಜೀವಿಗಳಾಗಬೇಕು. ಅಲ್ಪವಾದುದಕ್ಕೆ ಆಶಿಸದೆ ಮಹತ್ತಾದುದನ್ನೆ ಬಯಸಬೇಕು. ಅಲ್ಪಕಾಲದಲ್ಲೆ ಫಲ ದೊರೆಯಲಿಲ್ಲ ಎಂದು ನಂಬಿಕೆ ಕಳೆದುಕೊಂಡು ಹತಾಶರಾಗಬಾರದು. ಉಕ್ಕಿನಂಥಾ ಚಿತ್ತದಾರ್ಢ್ಯ ಮತ್ತು ಶ್ರದ್ಧೆಯಿರುವವರು ದೊಡ್ಡದನ್ನು ಸಾಧಿಸಬಲ್ಲರು. ಹಣ-ಕೀರ್ತಿಗಳ ವ್ಯಾಮೋಹಕ್ಕೆ ಒಳಗಾಗಿ ನೀತಿಗೆಟ್ಟ ನಡೆವಳಿಕೆಯನ್ನು ರೂಢಿಸಿಕೊಳ್ಳಬಾರದು. ಮಹಾಫಲಕ್ಕೆ ಹೆಚ್ಚು ಕಾಲವೂ ಶ್ರದ್ಧಾಯುಕ್ತ ಸಾಧನೆಯೂ ಅಗತ್ಯ. ಜನರ ಕೈ ಚಪ್ಪಾಳೆ, ಪತ್ರಿಕಾಪ್ರಸಿದ್ಧಿ, ಬಿರುದು, ಪ್ರಶಸ್ತಿ-ಸನ್ಮಾನ ಮುಂತಾದ ಅಗ್ಗದ ಆಸೆಗಳಿಗೆ ಬಲಿಯಾದರೆ ಅವು ಮತಿಯನ್ನೂ ವಿವೇಕವನ್ನೂ ಮಂಕುಗೊಳಿಸುತ್ತವೆ.

ವಿದ್ಯಾರ್ಥಿದೆಸೆಯಲ್ಲಿ ಜ್ಞಾನಾರ್ಜನೆ, ಕೌಶಲಗಳಲ್ಲಿ ತರಬೇತಿ, ಆಟೋಟ-ವ್ಯಾಯಾಮಗಳಿಂದ ಆರೋಗ್ಯರಕ್ಷಣೆ ಯುವಜನರ ಮುಖ್ಯಹೊಣೆ. ದೈಹಿಕ, ಮಾನಸಿಕ, ಆರೋಗ್ಯ ಮುಖ್ಯ. ಅದಕ್ಕಿಂತ ಮುಖ್ಯವಾದುದು ಆರೋಗ್ಯಕರವಾದ ಮನೋಧರ್ಮ. ಈ ಬಗ್ಗೆ ಮತ್ತು ಇನ್ನೂ ಕೆಲವು ವಿಚಾರಗಳ ಬಗ್ಗೆ ತರುಣ ಪುಟ್ಟಪ್ಪನವರು ವಿಶದವಾಗಿ ಮನವರಿಕೆ ಮಾಡಿಕೊಡುತ್ತಾರೆ. ಅವರ ಮಾತುಗಳಲ್ಲೆ ಈ ವಿಷಯವನ್ನು ಮುಂದಿಟ್ಟರೆ ಮನಮುಟ್ಟುತ್ತದೆ:

**"ವಿದ್ಯಾರ್ಥಿ ಜೀವನವೂ ಒಂದು ತಪಸ್ಸಾಧನೆ. ಪ್ರತಿಯೊಬ್ಬ ದಿಟ ವಿದ್ಯಾರ್ಥಿಯೂ ಒಬ್ಬ ಗೌರವ ತಪಸ್ವಿ. ವಿದ್ಯಾರ್ಜನೆಯ ಸಮಯವೆಂದರೆ ಆತ್ಮಶಕ್ತಿಸಂಗ್ರಹದ ಕಾಲ. ಬುದ್ಧಿಯನ್ನು ಮಸೆದು, ಭಾವವನ್ನು ಕಡೆದು, ಕವಿಗಳ ಕಾವ್ಯಗಳಲ್ಲಿಯೂ, ತತ್ತ್ವಜ್ಞರ ದರ್ಶನಗಳಲ್ಲಿಯೂ, ವೈಜ್ಞಾನಿಕ ಸಂಶೋಧನೆಗಳಲ್ಲಿಯೂ, ರಾಷ್ಟ್ರರಚನಾ ಸಮರ್ಥರ ರಾಜಕೀಯ ಶಾಸ್ತ್ರಗಳಲ್ಲಿಯೂ ಮನಸ್ಸನ್ನು ಹದಗೊಳಿಸಿ, ಚಿರಕಾಲವೂ ಶ್ರೇಯಸ್ಕರವಾದ ಸಂಸ್ಕೃತಿಯ ದೇವತೆಯನ್ನು ರಚಿಸಿ ಆಕೆಯನ್ನು ಮನೋಮಂದಿರದಲ್ಲಿ ಸ್ಥಾಪಿಸಲು ಬದ್ಧಕಂಕಣರಾಗಿ ಬಂದಿರುವ ನೀವು ಅಂಥಾ ಇಚ್ಛೆಯಾಗಲಿ ಶಕ್ತಿಯಾಗಲಿ ಇಲ್ಲದ ಇತರರಂತೆ ಬಣ್ಣಗುಳ್ಳಿಯ ಹವ್ಯಾಸಗಳಲ್ಲಿ ಕಾಲಹರಣ ಮಾಡ ಬೇಡಿ. ನಾಡಿನ ಮುಂದಣ ಏಳ್ಗೆಗೂ ಕಲ್ಲುಹಾಕಿ, ನಿಮ್ಮ ಅಭ್ಯುದಯದ ಬೇರಿಗೂ ಬಿಸಿನೀರು ಹೊಯ್ದು ಕೊಳ್ಳಬೇಡಿ."**

"ಒಣಕಲು ಆಚಾರ, ಸುಳ್ಳುಭಯಗಳಿಂದ ಪಾರಾಗಬೇಕಾದರೆ ದೇವರು, ಧರ್ಮ, ಭಕ್ತಿ, ಪೂಜೆ, ಇಹ-ಪರ ಮೊದಲಾದ ವಿಚಾರಗಳ ಬಗ್ಗೆ ಸರಿಯಾದ ಜ್ಞಾನ ಪಡೆಯಬೇಕು. ಅಪೇಕ್ಷೆಯಿದ್ದಲ್ಲಿ ಈ ವಿಚಾರಗಳನ್ನು ತಿಳಿದುಕೊಳ್ಳಲು ಎಲ್ಲರಿಗೂ ಸಾಧ್ಯ. ಇವುಗಳನ್ನು ಸುಲಭವಾಗಿ ಲೋಕಕ್ಕೆ ತಿಳಿಸಿ ಕೊಟ್ಟವರು ಶ್ರೀರಾಮಕೃಷ್ಣ ಪರಮಹಂಸರು. ಅವರು ಓದು ಬರೆಹ ಬಲ್ಲವರಲ್ಲ. ಆದರೂ ದೇಶ ವಿದೇಶಗಳ ಮಹಾ ಮಹಾಮೇಧಾವಿಗಳು, ಪಂಡಿತರು ಅವರ ಬಳಿಗೆ ಬಂದು ಉಪದೇಶಾಮೃತವನ್ನು ಸವಿದರು. ಅವರ ಪರಮಶಿಷ್ಯರಾದ ಸ್ವಾಮಿ ವಿವೇಕಾನಂದರು ಯೂರೋಪು-ಅಮೆರಿಕೆಗಳಿಗೆ ಹೋಗಿ ತಮ್ಮ ಗುರುಗಳ ವಿಶಾಲ ದೃಷ್ಟಿಯ ಸಂದೇಶವನ್ನು ಬಿತ್ತರಿಸಿದರು. 'ಶ್ರೀರಾಮಕೃಷ್ಣ ವಚನಾಮೃತ' ಎಂಬ ಪುಸ್ತಕವನ್ನು ಯುವಕರಾದ ನೀವೆಲ್ಲರೂ ಓದಬೇಕು. ನಿಮ್ಮ ಜೀವನದಲ್ಲಿ ಶಾಂತಿ, ಶಕ್ತಿ, ಭಕ್ತಿ, ವಿವೇಕ, ಸುಖ ಎಲ್ಲವೂ ಹೆಚ್ಚಾಗುತ್ತವೆ. ಓದಿದಮೇಲೆ ನೀವು ಬೇರೆಯೆ ವ್ಯಕ್ತಿಗಳಾಗುತ್ತೀರಿ ಎಂದು ನಾನು ಶಪಥಮಾಡಿಹೇಳುತ್ತೇನೆ."

ಇನ್ನೂ ದೀರ್ಘಕಾಲ ಚೆನ್ನಾಗಿ, ದೈಹಿಕ-ಮಾನಸಿಕ ಆರೋಗ್ಯದಿಂದ ಬಾಳಬೇಕಾಗಿರುವ, ದೇಶವನ್ನು ಭವ್ಯವಾಗಿ ಕಟ್ಟಬೇಕಾಗಿರುವ, ರಾಷ್ಟ್ರದ ಸಂಪತ್ತು-ಶಕ್ತಿಗಳಾದ ಯುವಕ-ಯುವತಿಯರು ಯಾವುದೇ ದುಶ್ಚಟಗಳಿಗೆ ಒಳಗಾಗದೆ, ದುರ್ಬಲ ಮನದವರಾಗದೆ, ಎಚ್ಚರಿಕೆಯಿಂದಿರಬೇಕು. ಸಂಯಮ ಹಾಗೂ ವಿವೇಕ ಇರಿಸಿಕೊಂಡು ಮತಿಗೌರವವನ್ನು ಕಾಪಾಡಿಕೊಳ್ಳಬೇಕು. ಮನುಷ್ಯರಾಗಿ ಉನ್ನತ ಗುರಿಯನ್ನು ಸಾಧಿಸಬೇಕು. ಯಾವುದೊ ಮೌಢ್ಯಸಂಪ್ರದಾಯಕ್ಕೊ, ಸಂಕುಚಿತವಾದ ಜಾತೀಯತೆಯ ದುರ್ಭಾವನೆಗಳಿಗೊ, ಸ್ವಾರ್ಥರಾಜಕಾರಣಕ್ಕೊ, ಭ್ರಷ್ಟನಾಯಕರಿಗೊ, ಅಪಾರ ಹಣ ಸಂಪಾದನೆಯ ಕೀಳು ದುರಾಸೆಗೊ, ವಿಕೃತ ಕಾಮಕ್ಕೊ ದಾಸರಾಗದೆ, ನಿರಂಕುಶಮತಿಗಳಾಗಿ, ವೈಚಾರಿಕ ಹಾಗೂ ವೈಜ್ಞಾನಿಕ ದೃಷ್ಟಿಯನ್ನು ಬೆಳೆಸಿಕೊಳ್ಳಬೇಕು. ಎಂಥಾ ಪ್ರತಿಕೂಲ ಸಂದರ್ಭಗಳಲ್ಲೂ ಕುಗ್ಗದೆ, ಹತಾಶರಾಗದೆ ತಮ್ಮ ಮತಿಗೌರವವನ್ನು ಕಾಪಾಡಿಕೊಳ್ಳಬೇಕು.

ಎಲ್ಲಕ್ಕೂ ಮುಖ್ಯವಾಗಿ ತಮ್ಮ ಆತ್ಮಶ್ರೀಯನ್ನು ಮರೆಯದೆ, ಮರೆಮಾಡದೆ, ತೇಜೋವಂತರಾಗಿ ಬದುಕಬೇಕು. ಕತ್ತಲೆಯಳಿದು ಬೆಳಕಿಗೆಡೆಗೊಡುವಂತೆ ಮಹದ್ಭಾವನೆಗಳು ಮಹದಾಲೋಚನೆಗಳೂ ಚಿತ್ತದಲ್ಲಿ ಸದಾ ಸಂಚರಿಸುವಂತೆ ಮಾಡಿದರೆ ಕೀಳು ಬಗೆ ತನಗೆ ತಾನೆ ಹಿಂಗಿ ಆತ್ಮಕ್ಕೆ, ವ್ಯಕ್ತಿತ್ವಕ್ಕೆ ಕಾಂತಿ ಬರುತ್ತದೆ. ಶ್ರೇಷ್ಠವಾದ ಪುಸ್ತಕಗಳಿಂದ, ಶ್ರೀರಾಮಕೃಷ್ಣ-ಶ್ರೀಶಾರದಾಮಾತೆ-ಸ್ವಾಮಿ ವಿವೇಕಾನಂದರಂತಹ ಮಹಾ ವ್ಯಕ್ತಿಗಳ ಅನುಭವಾಮೃತ ವಾಕ್ಯಗಳಿಂದ ಮಹ ದಾಲೋಚನೆಗಳು ಯಥೇಚ್ಛವಾಗಿ ದೊರೆಯುತ್ತವೆ. ಅವುಗಳನ್ನು ಮನನ ಮಾಡಿ ಮೈಗೂಡಿಸಿಕೊಳ್ಳುವುದರಿಂದ ಬದುಕಿಗೊಂದು ಅರ್ಥ ಬರುತ್ತದೆ. ಆತ್ಮಶ್ರೀ ಬೆಳಗುತ್ತದೆ. ಆತ್ಮಶ್ರೀಯೊಂದಿದ್ದರೆ ಇತರ ಶ್ರೀಗಳೆಲ್ಲ ಇಮ್ಮಡಿ-ಮುಮ್ಮಡಿಯಾಗಿ ವರ್ಧಿಸಿ ಶೋಭಿಸುತ್ತವೆ.

ಯುವಜನರೂ ವಿದ್ಯಾರ್ಥಿಗಳೂ ತಮ್ಮೊಳಗಿರುವ ಈ ಆತ್ಮಶ್ರೀಯನ್ನು ಅರಿತು ಪ್ರಕಾಶಗೊಳಿಸಿಕೊಳ್ಳಬೇಕು. ತರುಣ ಕವಿ ಪುಟ್ಟಪ್ಪನವರ ಮಾತಿನಲ್ಲೆ ಹೇಳುವುದಾದರೆ . **"ವಿದ್ಯಾರ್ಥಿಗಳಿಗೇಕೆ ಆತ್ಮಶ್ರೀ? ಎಂಬ ಪ್ರಶ್ನೆಗೆ ಉತ್ತರ: ಆತ್ಮಶ್ರೀಯಿಲ್ಲದ ವಿದ್ಯೆ ಶ್ರೀರಾಮನಿಲ್ಲದ ಅಯೋಧ್ಯೆ."**

**ಆಶ್ರಮದ ಕಾರ್ಯಕ್ರಮಗಳು**

**ಜನವರಿ 2005**

| | | |
|---|---|---|
| ಕಲ್ಪತರು ದಿನ | 1 | ಶನಿವಾರ |
| ಶ್ರೀಶಾರದಾದೇವಿ ಜಯಂತಿ | 3 | ಸೋಮವಾರ |
| ಸ್ವಾಮಿ ಶಿವಾನಂದ ಜಯಂತಿ | 7 | ಶುಕ್ರವಾರ |
| ಏಕಾದಶಿ | 7 | ಶುಕ್ರವಾರ |
| ಸ್ವಾಮಿ ಶಾರದಾನಂದ ಜಯಂತಿ | 15 | ಶನಿವಾರ |
| ಸ್ವಾಮಿ ತುರೀಯಾನಂದ ಜಯಂತಿ | 24 | ಸೋಮವಾರ |

**ಪ್ರಾಯೋಜಕರು** : ಎಸ್. ಆರ್. ಸುಮಿತ್ರ, # 480 "ಗುರುಶ್ರೀ", ಈಸ್ಟ್ ಎಂಡ್ ಮೇನ್ ರೋಡ್, 9ನೇ ಬ್ಲಾಕ್, ಜಯನಗರ, ಬೆಂಗಳೂರು 560 069